# ಅಂದ ಹೆಚ್ಚಳಕ್ಕೆ ಎಣ್ಣೆ!



ಸೌಂದರ್ಯವರ್ಧನೆಯಲ್ಲಿ ಎಸೆನ್ಶಿಯಲ್ ಆಯಿಲ್ ಪಾತ್ರ ಮಹತ್ವದ್ದು. ಕೊಬ್ಬರಿ ಎಣ್ಣೆಯಿಂದ ಹಿಡಿದು ಟೀ ಟ್ರೀ ಆಯಿಲ್‌ವರೆಗೆ ವಿವಿಧ ರೀತಿಯ ಎಣ್ಣೆಗಳನ್ನು ಬಳಸಿ ಅಂದ ಹೆಚ್ಚಿಸಿಕೊಳ್ಳಬಹುದು.

■ ಪ. ರಾಮಕೃಷ್ಣಶಾಸ್ತ್ರಿ

ಚಂದ ಕಾಣಲು ಏನೇ ಸಾಹಸ ಮಾಡಲೂ ಹೆಂಗಸರು ರೆಡಿ. ಅದು ಮಾಮೂಲಿ ಕಡ್ಲೆ ಹಿಟ್ಟಿನಿಂದ ಹಿಡಿದು ಪಾರ್ಲರ್‌ಗಳಿಗೆ ಹೋಗಿ ಬ್ಲೀಚ್, ಫೇಷಿಯಲ್ ಮಾಡಿಸಿಕೊಳ್ಳುವವರೆಗೆ. ಸೌಂದರ್ಯವರ್ಧನೆಯಲ್ಲಿ ಹಲವು ಸಾಮಗ್ರಿಗಳನ್ನು ಬಳಸಲಾಗುತ್ತದೆ. ಇವುಗಳಲ್ಲಿ ಪ್ರಮುಖವಾಗಿ ವಿವಿಧ ರೀತಿ ಎಸೆನ್ಶಿಯಲ್ ಆಯಿಲ್‌ಗಳೂ ಸೇರಿವೆ. ಶ್ರೀಗಂಧದ ಎಣ್ಣೆ, ಆಲಿವ್ ಆಯಿಲ್, ಅಗಸೆಬೀಜ ಎಣ್ಣೆ, ಟೀ ಟ್ರೀ ಆಯಿಲ್, ಶುದ್ಧ ತೆಂಗಿನೆಣ್ಣೆ ಜೊಜೋಬ ಎಸೆನ್ಸ್ ಮುಂತಾದವು ಸೌಂದರ್ಯ ಕಾಪಾಡುವಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ಇದರ ಜೊತೆಗೆ ಅಗರ್ ಎಂಬ ಸುಗಂಧ ದ್ರವ್ಯದಂತಹ ತೈಲವೂ ಸೌಂದರ್ಯವರ್ಧನೆಗೆ ಸಹಕಾರಿ.

ಅಗರ್ ಎಂಬ ತೈಲ ಸೌಂದರ್ಯ ಚಿಕಿತ್ಸೆಯಲ್ಲಿ ಬಳಕೆಯಲ್ಲಿದೆ. ಅಗರ್ ರಾಳದಿಂದ ಭಟ್ಟಿಯಿಳಿಸಿದ ಸಾರಭೂತ ತೈಲ ಮಾರುಕಟ್ಟೆಯಲ್ಲಿ ದೊರೆಯುತ್ತದೆ. ಅರ್ಧ ಕಪ್ ತೆಂಗಿನೆಣ್ಣೆಯ ಜೊತೆಗೆ ಕೆಲವು ಹನಿಗಳಷ್ಟು ಈ ತೈಲವನ್ನು ಮಿಶ್ರ ಮಾಡಿ ಮುಖ ಮತ್ತು ಕುತ್ತಿಗೆಗೆ ಲೇಪಿಸಿ ತೈಲವು ತ್ವಚೆಯಲ್ಲಿ ಇಂಗುವ ತನಕ ಹಗುರವಾಗಿ ನೀವಬೇಕು. ಕೆಲವು ದಿನಗಳ ಕಾಲ ಮಾಯಿಶ್ಚರೈಸರ್‌ನಂತೆ ಈ ಉಪಚಾರ ಮಾಡುವುದರಿಂದ ಒಣ ತ್ವಚೆ ತೇವಯುಕ್ತವಾಗುತ್ತದೆ. ಮುಖದಲ್ಲಿರುವ ಅಕಾಲಿಕ ವಯಸ್ಸಿನ ಚಿಹ್ನೆ, ಸುಕ್ಕು ಮಾಯವಾಗುತ್ತದೆ. ಚರ್ಮಕೋಶಗಳಿಗೆ ಪುನರುತ್ಪಾದನೆಯ ಚೈತನ್ಯ ಪ್ರಾಪ್ತವಾಗುತ್ತದೆ. ಮುಖದಲ್ಲಿರುವ ಕಲೆಗಳು ಮಾಸುತ್ತವೆ. ಇದರಲ್ಲಿರುವ ಪ್ರಬಲ ಕೊಬ್ಬಿನಾಮ್ಲ ಬ್ಯಾಕ್ಟೀರಿಯಾ ಮತ್ತು ಶಿಲೀಂಧ್ರ ವಿರೋಧಿಯಾದ ಕಾರಣ ಮೊಡವೆಗಳು, ಬೆವರುಗುಳ್ಳೆಗಳು ಮೂಡದಂತೆ ತಡೆಯುತ್ತದೆ. ಇಡೀ ದೇಹದ ತ್ವಚೆಯ ಕಾಂತಿಗಾಗಿ ಇದೇ ಮಸಾಜ್ ಮಾಡಬಹುದು.



ಬಿಸಿಲಿಗೆ ಹೋಗಬೇಕಾದ ಸಂದರ್ಭದಲ್ಲಿ ಯಾವುದೇ ಫೇಸ್ ಕ್ರೀಮ್ ಜೊತೆಗೆ ಅಗರ್ ತೈಲ ಮಿಶ್ರ ಮಾಡಿ ಮುಖಕ್ಕೆ ಹಚ್ಚಿಕೊಂಡರೆ ಬಿಸಿಲ ತಾಪದಿಂದ ಮುಖ ಕಪ್ಪಾಗುವುದಿಲ್ಲ. ಕಣ್ಣಿನ ಸುತ್ತಲೂ ಕಪ್ಪು ವರ್ತುಲವಿದ್ದರೆ ತಿಳಿಯಾಗುತ್ತದೆ. ಇದರಲ್ಲಿರುವ ಪ್ರೊಟೀನ್ ಮುಖಕಾಂತಿಯನ್ನು ಜೋಪಾನವಾಗಿ ಉಳಿಸುತ್ತದೆ. ಮುಖದ ಸುಕ್ಕು ನಿವಾರಣೆಗೆ ಇನ್ನೊಂದು ಉಪಾಯವೂ ಇದೆ. ಹಾಲಿನ ಕೆನೆ, ಮುಲ್ತಾನ್ ಮಿಟ್ಟಿಗಳನ್ನು ಮಥಿಸಿ ನಾಲ್ಕಾರು ಹನಿ ಅಗರ್ ತೈಲ ಸೇರಿಸಬೇಕು. ಇದನ್ನು ಫ್ರಿಜ್‌ಲ್ಲಿರಿಸಿ ಸ್ವಲ್ಪ ಮಟ್ಟಿಗೆ ಗಟ್ಟಿಯಾದ ಬಳಿಕ ಕುತ್ತಿಗೆಯಿಂದ ಮುಖದ ತನಕ ಹಚ್ಚಿ ಮಸಾಜ್ ಮಾಡಬೇಕು. ಒಣಗುವಾಗ ಬಿಸಿನೀರಿನಿಂದ ತೊಳೆಯಬೇಕು. ಇದರಿಂದ ಸುಕ್ಕುಗಳು, ಸೂಕ್ಷ್ಮ ರೇಖೆಗಳು, ಕಣ್ಣಿನ ಸುತ್ತಲಿನ ಕಲೆಗಳು ತಿಳಿಯಾಗಿ ಯೌವ್ವನದ ನವಕಾಂತಿ ಹೊಮ್ಮುತ್ತದೆ. ಕೇವಲ ಅಗರ್ ತೈಲವನ್ನು ಫೇಸ್ ಕ್ಲೆನ್ಸರ್ ಆಗಿ ಮುಖಕ್ಕೆ ಹಚ್ಚಿಕೊಳ್ಳುವುದೂ ಕೂಡ ಪರಿಣಾಮಕರವಾಗಿದೆ.

ಬೆಣ್ಣೆಹಣ್ಣಿನ ತಿರುಳು, ಮೊಟ್ಟೆಯ ಹಳದಿ, ಅರಶಿಣ, ಹಾಲಿನ ಕೆನೆಗಳನ್ನು ಮಥಿಸಿ ಕೆಲವು ಹನಿ ಅಗರ್ ತೈಲ ಬೆರೆಸಿ ಮುಖಕ್ಕೆ ಹಚ್ಚಿ ಮೃದುವಾಗಿ ತಿಕ್ಕಿಕೊಳ್ಳಬೇಕು. ಒಣಗಿದ ಮೇಲೆ ಹಗುರ ಬಿಸಿನೀರಿನಿಂದ ತೊಳೆಯಬೇಕು. ಇದರಿಂದ ಮೊಡವೆಗಳು ಮೂಡುವುದಿಲ್ಲ. ಇರುವ